ಕರ್ನಾಟಕ ಸರ್ಕಾರ

ಸಂಖ್ಯೆ: ಆಕುಕ 234 ಅಮುಕಾ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 01/07/2020.

**:ಸುತ್ತೋಲೆ:**

ವಿಷಯ: ರಾಜ್ಯದ ಜಿಲ್ಲಾ ಮತ್ತು ಸಾರ್ವಜನಿಕ ಆಸ್ಪತ್ರೆಗಳಲ್ಲಿ ದಾಖಲಾಗಿರುವ ಕೋವಿಡ್-19 ಸೋಂಕಿತ ರೋಗಿಗಳಿಗೆ ತಜ್ಞರ ಸಲಹೆಯಂತೆ ಆಹಾರವನ್ನು ಒದಗಿಸುವ ಬಗ್ಗೆ.

ಉಲ್ಲೇಖ: ಪತ್ರ ಸಂಖ್ಯೆ: ಎನ್‌ವಿಬಿಡಿಸಿಪಿ/ಕೋವಿಡ್-19 /ಇಎಸ್‌ಟಿ7/2020-21, ದಿನಾಂಕ: 29/06/2020

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದ ಜಿಲ್ಲಾ ಮತ್ತು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಹಾಗೂ COVID CARE CENTERS, DEDICATED COVID CARE CENTERS ಮತ್ತು DEDICATED COVID HOSPITAL ಗಳಲ್ಲಿ ದಾಖಲಾಗಿರುವ ಕೋವಿಡ್-19 ಸೋಂಕಿತ ರೋಗಿಗಳಿಗೆ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವುದು ಅವಶ್ಯಕವಾಗಿರುವುದರಿಂದ, ತಜ್ಞರ ಸಲಹೆಯ ಮೇರೆಗೆ ಈ ಕೆಳಗಿನ ಅನುಬಂಧದಲ್ಲಿ ನಮೂದಿಸಿರುವಂತೆ ಉತ್ತಮ ದರ್ಜೆಯ ಪೌಷ್ಠಿಕಾಂಶಯುಕ್ತ ಆಹಾರವನ್ನು ರೋಗಿಗಳಿಗೆ ಕಾಲಕಾಲಕ್ಕೆ ತಪ್ಪದೆ ಒದಗಿಸುವಂತೆ ಈ ಮೂಲಕ ಸೂಚಿಸಲಾಗಿದೆ.

**ಕೋವಿಡ್-19 ಸೋಂಕಿತ ರೋಗಿಗಳಿಗೆ ತಜ್ಞರ ಸಲಹೆಯಂತೆ ಸಿದ್ಧಪಡಿಸಿರುವ ಪಥ್ಯಾಹಾರದ ಪಟ್ಟಿ**

| ದಿನ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ | ಭಾನುವಾರ |
|---|---|---|---|---|---|---|---|
| ಸಮಯ, ಬೆಳಿಗ್ಗೆ 7.00 ಕ್ಕೆ | ರವೆ ಇಡ್ಲಿ | ಪೊಂಗಲ್ | ಸೆಟ್ ದೋಸೆ | ಅಕ್ಕಿ ಇಡ್ಲಿ | ಬಿಸಿಬೇಳೆ ಬಾತ್ | ಚೌ-ಚೌ ಬಾತ್ | ಸೆಟ್ ದೋಸೆ |
| ಬೆಳಿಗ್ಗೆ 10.00 ಕ್ಕೆ | ಕಲ್ಲಂಗಡಿ ಹಣ್ಣು | ಪಪಾಯ ಹಣ್ಣು | ಕರಬೂಜ ಹಣ್ಣು | ಕಲ್ಲಂಗಡಿ ಹಣ್ಣು | ಪಪಾಯ ಹಣ್ಣು | ಕರಬೂಜ ಹಣ್ಣು | ಪಪಾಯ ಹಣ್ಣು |
| | ರಾಗಿ ಗಂಜಿ | ಪಾಲಾಕ್ ಸೂಪ್ | ರವೆ ಗಂಜಿ | ಕ್ಯಾರೆಟ್ ಸೂಪ್ | ರಾಗಿ ಗಂಜಿ | ಟೊಮೋಟೊ ಸೂಪ್ | ರವೆ ಗಂಜಿ |
| ಮದ್ಯಾಹ್ನ ಊಟ 1.00 ಕ್ಕೆ | ರೊಟ್ಟಿ/ಚಪಾತಿ-2 + ಪಲ್ಯ+ ಅನ್ನ+ಬೇಳೆಸಾರು+ಮೊಸರು/ಮೊಟ್ಟೆ | | | | | | |
| ಸಾಯಂಕಾಲ 5.30 ಕ್ಕೆ | ಏಲಕ್ಕಿ ಬಾಳೆಹಣ್ಣು + ಮಾರಿ ಬಿಸ್ಕೇಟ್-3 / ಪ್ರೋಟೀನ್ ಬಿಸ್ಕೇಟ್-2/ ಫ್ರೆಶ್ ಡೇಟ್ಸ್-2+ ಮ್ಯಾಂಗೋ ಬಾರ್(ವಿಟಮಿನ್-ಸಿ ಯುಕ್ತ) | | | | | | |
| ರಾತ್ರಿ ಊಟ 7.00 ಕ್ಕೆ | ರೊಟ್ಟಿ/ಚಪಾತಿ-2 + ಪಲ್ಯ+ ಅನ್ನ+ಬೇಳೆಸಾರು+ಮೊಸರು | | | | | | |
| ರಾತ್ರಿ 9.00 ಕ್ಕೆ | ಫ್ಲೇವರ್ಡ್ ಮಿಲ್ಕ್ | | | | | | |

- ಮೇಲಿನಂತೆ ಪ್ರತಿ ದಿನವೂ ಆಹಾರ ವ್ಯವಸ್ಥೆಯನ್ನು ರೋಗಿಗಳಿಗೆ, ವೈದ್ಯರುಗಳಿಗೆ, ಅಧಿಕಾರಿಗಳಿಗೆ ಮತ್ತು ಇತರರಿಗೆ ಒದಗಿಸುವುದು.
- ಬೆಳಗಿನ ಉಪಹಾರವನ್ನು 7.00 ಗಂಟೆಗೆ, ಮದ್ಯಾಹ್ನದ ಊಟವನ್ನು 1.00 ಗಂಟೆಗೆ ರಾತ್ರಿ ಊಟವನ್ನು 7.00 ಗಂಟೆಗೆ ನಿಯಮಿತವಾಗಿ ಒದಗಿಸಲು ಕ್ರಮವಹಿಸುವುದು.
- ಪ್ರತಿ ವ್ಯಕ್ತಿಗೆ ಮೇಲಿನ ಆಹಾರದ ವೆಚ್ಚಗಳಿಗಾಗಿ ರೂ.250 ಕ್ಕೆ ಮೀರದಂತೆ ಕ್ರಮವಹಿಸಿ, ಸದರಿ ಮೊತ್ತವನ್ನು ಆಸ್ಪತ್ರೆಯ ಎಆರ್‌ಎಸ್ ನಿಧಿಯಿಂದ / ಜಿಲ್ಲಾಧಿಕಾರಿಗಳ ಅಧೀನದಲ್ಲಿನ ವಿಪತ್ತು ಪರಿಹಾರ ನಿಧಿಯಿಂದ ಪಡೆದುಕೊಳ್ಳಲು ತಿಳಿಸಿದೆ.

(ಜಾವೇದ್ ಅಖ್ತರ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ